OS No. 169/2018
DW-1

ದಿನಾಂಕಃ 31-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಜಿ ಅರ್ ವಕೀಲರಿಂದ**

7. ವಾದಿ ಸರ್ವೆ ನಂ 8/7 ರ ಅನುಭವಕ್ಕೆ ತೊಂದರೆಕೊಟ್ಟಿರುತ್ತಾರೆ ಎಂದು ನಾನು ಯಾವುದಾದರೂ ದೂರನ್ನು ದಾಖಲಿಸಿದ್ದೀರ ಎಂದರೆ ಸಾಕ್ಷಿ ಸದರಿ ಜಮೀನಿನಲ್ಲಿ ಅಕ್ರಮವಾಗಿ ರಸ್ತೆ ಮಾಡಲು ಪ್ರಯತ್ನಿಸಿದ ಕುರಿತು 4 ಜನರ ಮೇಲೆದೂರನ್ನು ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ರಂಗಪ್ಪ , ಶ್ರೀನಿವಾಸ, ಶಾಂತಕುಮಾರ ಮತ್ತು ದುರ್ಗಾರಾವ್ ರವರ ವಿರುದ್ಧ 2019 ರಲ್ಲಿ ದೂರು ದಾಖಲಿಸಿರುತ್ತೇನೆ. ದಿನಾಂಕ ನನಗೆ ಹೇಳಲಾಗುವುದಿಲ್ಲ. ಸದರಿ ದೂರಿನ ಹಿನ್ನೆಲೆಯಲ್ಲಿ ಸದರಿಯವರ ಮೇಲೆ ಪ್ರ ವ ವರದಿ ದಾಖಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಗೆ ಈಗ ಬಸವಪಟ್ಟಣಾ ಪೊಲೀಸ್ ಠಾಣೆಯಲ್ಲಿ ತಾನು ದಾಖಲಿಸಿದ ದೂರು ಮತ್ತು ಅದರ ಮೇಲೆ ದಾಖಲಾದ ಸಿಆರ್ ನಂ 2/2019 ರ ಪ್ರ ವ ವರದಿ ಮತ್ತು ದೂರನ್ನು ತೋರಿಸಲಾಗಿ ಸಾಕ್ಷಿ ಅವನ್ನು ನೋಡಿ ಒಪ್ಪಿ ಗುರುತಿಸಿದ ಮೇರೆಗೆ **ನಿಪಿ-34 ಮತ್ತು 35** ಎಂದು ಗುರುತಿಸಲಾಯಿತು. ಸದರಿ ನಿಪಿ-35 ರಲ್ಲಿರುವ ಸಹಿ ನನ್ನದೇ.

8. ಸದರಿ ನಿಪಿ-35 ರಲ್ಲಿ " ದಿನಾಂಕ 28-12-2018 ರಂದು ಬೆಳಿಗ್ಗೆ 10.30ರ ಸುಮಾರಿಗೆ ರಂಗಪ್ಪ , ಶ್ರೀನಿವಾಸ, ದುರ್ಗಾರಾವ್ , ಶಾಂತರಾಜ್ ರವರು ನನ್ನ ಹೊಲಕ್ಕೆ ಅಕ್ರಮವಾಗಿ ಪ್ರವೇಶಿಸಿ ಅಕ್ಕಪಕ್ಕದಲ್ಲಿ ಅವರ ಜಮೀನು ಇಲ್ಲದೆ ಇದ್ದರು ಬೇರೆ ಕಡೆಯಿಂದ ಮಣ್ಣನ್ನು ತೆಗೆದುಕೊಂಡು ಬಂದು ನನ್ನ ಹೊಲದ ಮಧ್ಯ ,ಬಾಗದಲ್ಲಿ ರಸ್ತೆಯನ್ನು ಮಾಡಿರುತ್ತಾರೆ " ಎಂದರೆ ಸರಿ. ಸಾಕ್ಷಿ ಮುಂದುವರೆದು ನಿಪಿ-1 ನ್ನು ನನ್ನ ಮಗ ಟೈಪ್ ಮಾಡಿಸಿಕೊಂಡು ಬಂದಿದ್ದು ಅದಕ್ಕೆ ನಾನು ಸಹಿ ಮಾತ್ರ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದೂರಿನ ಹಿನ್ನೆಲೆಯಲ್ಲಿ ಪೊಲೀಸರು ಮಹಜರನ್ನು ಜರುರಗಿಸಿದರು ಎಂದರೆ ಸರಿ. ಸದರಿ ಮಹಜರಿಗೆ ನಾನು ಸಹ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ

ಈಗ 05-01-2019ರ ಮಹಜರಿನ ಪ್ರಮಾಣಿತ ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಒಪ್ಪಿ ಗುರುತಿಸಿದ ಮೇರೆಗೆ ಅದನ್ನು **ನಿಪಿ-36** ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು **ನಿಪಿ-36(ಎ)** ಎಂದು ಗುರುತಿಸಲಾಯಿತು. ನಾನು ಹಾಜರುಪಡಿಸಿರುವ ನಿಡಿ-4 ರ ದಾಖಲೆಯಲ್ಲಿ ನನ್ನ ಜಮೀನಿನಲ್ಲಿ ದಾರಿ ಹಾದುಹೋಗಿರುವ ಕುರಿತು ಸರ್ಕಾರದಿಂದ ನಾನು ಪರಿಹಾರ ಪಡೆದಿರುವ ಅವಾರ್ಡ್ ನ ದಾಖಲೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಹಾಗಾಗಿ ನನಗೆ ನಿಡಿ-3 ರಿಂದ 5 ರ ದಾಖಲೆಗಳಲ್ಲಿ ಬರೆದಿರುವ ಸಂಗತಿಗಳ ಗೊತ್ತಿಲ್ಲ ಎಂದರೆ ಸರಿ.

9. ಬಸವಪುರ ಗ್ರಾಮದ ಸರ್ವೆ ನಂ 2 ರಿಂದ 13 ರವರೆಗೂ ಸಹ ಸರ್ಕಾರದವರು ರಸ್ತೆಯನ್ನು ಮಾಡಿದ್ದರು ಸಹ ಯಾವುದೇ ರಸ್ತೆ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, ಸದರಿ ರಸ್ತೆ ನಿರ್ಮಾಣ ಮಾಡುವ ಸಮಯಕ್ಕೆ ಪೊಲೀಸರು ಅಧಿಕಾರಿಗಳು ಹಾಗೂ ಕಂದಾಯ ಅಧಿಕಾರಿಗಳು ಉಪಿಸ್ಥಿತರಿದ್ದರು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)** **ಓ.ಹೇ.ಕೇ. ಸರಿ ಇದೆ.**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ.ಚನ್ನಗಿರಿ.**